


ಜವಾಬ್ದಾರಿ ಯಾಕೆ ಹೊರಲಿ?

ರಾಹುಲ ಗಂಭೀರವಾದುದು ಭಾರತಿಗೂ ತಿಳಿಯಿತು. 'ಅಷ್ಟೆಲ್ಲಾ ಸೀರಿಯಸ್ ಆಗಬೇಡವ್ವೋ ನಾನು ಹೇಳಿದ್ದು ತಮಾಷೆಗೆ. ನಾನು ನಿಜ ಹೇಳ್ತೇನೆ ಗಂಡನನ್ನು ಬಿಟ್ಟು ಬಂದವಳು ಅಂತ ಕೇಳಿಸಿಕೊಂಡರೆ ಎಷ್ಟು ಕಷ್ಟವಾಗುತ್ತದೆ ಗೊತ್ತಾ? ಅದಕ್ಕಿಂತಲೂ ಹೆಚ್ಚು ಕೆಲವು ಗಂಡಸರು ಹೇಗೂ ಗಂಡ ಬಿಟ್ಟು ಬಂದಿದ್ದಾಳೆ ನಮಗೂ ಸಿಗುತ್ತಾಳೋ ಅಂತ ನೋಡುತ್ತಾರೆ. ಗಂಡಸರ ಕಣ್ಣು ಮೈಮೇಲೆ ಹರಿದಾಡುವಾಗ ಎಷ್ಟು ಕಷ್ಟವಾಗುತ್ತದೆ ಗೊತ್ತಾ? ಸೆರಗು ಸರಿಯಿಲ್ಲವೇನೋ ಅಂತ ಮತ್ತೆ ಮತ್ತೆ ಸೆರಗು ಸರಿ ಮಾಡಬೇಕಾಗುತ್ತದೆ'. ಭಾರತಿ ಹೇಳುತ್ತಾ ನಿಟ್ಟುಸಿರು ಬಿಟ್ಟಳು. ರಾಹುಲನಿಗೂ ಅದು ಅರ್ಥವಾಯಿತು. ಏನೂ ಹೇಳದೆ ಅವಲಕ್ಕಿಯನ್ನು ತಿಂದು ಮುಗಿಸಿ ಚಾ ಕುಡಿದ. ಭಾರತಿಯೂ ಕೂಡಾ ಕೆಲವು ಕ್ಷಣ ಮೌನಕ್ಕೆ ಶರಣು ಹೋದಳು.

ರಾಹುಲ ಮಾತಾಡುತ್ತಾ ಮಾತಾಡುತ್ತಾ ಇದ್ದಂತೆ ಸೂರ್ಯ ಕಂತಿದ್ದು ಗೊತ್ತಾಗಲಿಲ್ಲ. ಅವರಿಬ್ಬರ ಕಿವಿಯ ಹತ್ತಿರ ನುಸಿಗಳು ರಾಗವೆಳೆಯುತ್ತಿದ್ದವು. ರಾಹುಲ ಚಿಮಿಣಿ ದೀಪವುರಿಸಿಕೊಂಡು; ಅದರ ಜೊತೆಗೆ ತನ್ನ ಮಾಮೂಲಿಯನ್ನು ಇಟ್ಟುಕೊಂಡ. ಭಾರತಿ 'ಯಾಕೆ ಕುಡಿಯುತ್ತೀಯೋ ಮಾರಾಯ ಎಂದಳು. ರಾಹುಲ 'ಅದೆಲ್ಲಾ ನಿನಗ್ಯಾಕೆ ಹೇಳು? ಕುಡಿದ ಮೇಲಂತೂ ನಾನು ಅಪಾಯಕಾರಿಯಲ್ಲ ಎಂಬುದನ್ನು ತಿಳಿದುಕೋ ಎಂದ.

"ಹೋಗಲಿ ಬಿಡು ಕುಡಿ ಆದ್ರೆ ಜಾಸ್ತಿ ಕುಡೀಬೇಡ. ಎಷ್ಟು ಬೇಕೋ ಅಷ್ಟು ಕುಡಿದು ಊಟ ಮಾಡಬೇಕು. ನಾನು ನಿನ್ನತ್ರ ಮಾತಾಡಬೇಕು ಎಂದು ಬಂದರೆ ನೀನು ಹೀಗಾ ಮಾಡುವುದು?"

"ಹಾಗೆ ಹೀಗೆ ಏನೂ ಇಲ್ಲ" ಎಂದವನೇ ರಾಹುಲ ಗುಟುಕರಿಸಿದ. ಆಮೇಲೆ ಅವನಿಗೆ ಭಾರತಿಯ ಜೊತೆಗೆ ಮಾತಾಡಲು ಸರಿಯೆಂದು ಅನಿಸಿತು. ಮಧ್ಯದ ತೆರೆ ಸರಿಯಿತು. ರಾಹುಲ ಚಿಮಿಣಿ ದೀಪದಲ್ಲಿಯೇ ಸಿಗರೇಟು ಉರಿಸಿದ. ಭಾರತಿಯ ಮುಖದ ಮೇಲೆ ಚಿಮಿಣಿ ದೀಪದ ಬೆಳಕು ಬಿದ್ದು ಅದು ಮತ್ತಷ್ಟು ಬಂಗಾರದ ಬಣ್ಣದಂತೆ ಕಾಣಿಸಿತು. ಅವಳ ಕಣ್ಣುಗಳ ಹೊಳಪು ಮಾಯವಾಗಿರಲಿಲ್ಲ. ಅವಳು ಹೊಳೆಯುತ್ತಿದ್ದಾಳೆ ಎಂದನ್ನಿಸಿತು ರಾಹುಲನಿಗೆ.

"ಯಾಕೋ ಮಾರಾಯ, ತಲೆಗೆ ಏರಿತೇ ಹೇಗೆ? ಸಿಟ್ಟು ಬಾ ನಿನಗೆ? ಬುಸುಗುಡ್ತಾ ಇದ್ದಿಯಾ? ಯಾಕೆ? ಏನಾಯಿತು? ಭಾರತಿ ಚಿಮಿಣಿ ದೀಪದಲ್ಲಿ ಕಟ್ಟಿದ್ದ ಕರಿಯನ್ನು ತನ್ನ ಸೇಫ್ಟಿ ಪಿನ್ನಿನಲ್ಲಿ ತೆಗೆಯುತ್ತಾ ಹೇಳಿದಳು. 'ಮಾರಾಯ್ತಿ, ಬುಸುಗುಟ್ಟುವುದಕ್ಕೆ ನಾನೇನು ದಿವಾಕರನಾ? ಸಾಮಾನ್ಯ ಮನುಷ್ಯ ಮಾರಾಯ್ತಿ. ಮೇಳದ ಸಂಬಳದಲ್ಲಿ ಬದುಕುವವನು. ಆರು ತಿಂಗಳು ತಿರುಗಾಟ. ಆರು ತಿಂಗಳು ಪರದಾಟ; ರಾಹುಲ ವ್ಯಂಗ್ಯದಲ್ಲಿ ಭಾರತಿಗೆ ಚುಚ್ಚಿದ. ಬ್ಲೌಸಿನ ಹುಕ್ಕನ್ನು ತೆಗೆದು ಬೆನ್ನು ತೋರಿಸಿದಳು. ಅವಳ ಬೆನ್ನಲ್ಲಿ ದಿವಾಕರ ಕುಡಿದು ಬಂದು ಹೊಡೆದ ಗಾಯದ ಗುರುತುಗಳು. ಅವನಿಗೆ ಅವಳ ಮೇಲೆ ವಿಪರೀತವಾದ ಅನುಮಾನ. ಲಂಗವೆತ್ತಿ ಮೀನಖಂಡವನ್ನೂ ತೋರಿಸಿದಳು ಅಲ್ಲೂ ಕಲೆಗಳು.

'ರಾಹುಲ ನನಗೆ ಕೊನೆಗೂ ದಿವಾಕರನಿಂದ ಡೈವೋರ್ಸ್ ಸಿಕ್ಕಿತು. ಅದಕ್ಕಾಗಿ ನಾನು ನಡೆಸಿದ ಹೋರಾಟ ಸಾಮಾನ್ಯವಾದ್ದಲ್ಲ."

'ಮತ್ತೆ'

'ರಾಹುಲ, ಡೈವೋರ್ಸಿಗಾಗಿ ಸರ್ಕಸ್ ಮಾಡಿದೆ. ಕೋರ್ಟಿಗೆ ಹತ್ತಿದರೆ ಎಲ್ಲರೂ ದುರದುರನೆ ನೋಡುತ್ತಾರೆ. ಒಂದು ದಿನ ನನಗೆ ಕೋರ್ಟ್ ಇದ್ದ ದಿನವೇ ಒಬ್ಬ ಸೂಳೆಗೆ ದಂಡ ಹಾಕಿದರು. ಅವಳು ನಗುತ್ತಿದ್ದಳು. ಸೆರಗು ಜಾರಿಸಿ ಮತ್ತೆ ಸರಿ ಮಾಡಿಕೊಳ್ಳುತ್ತಿದ್ದಳು. ಎಲ್ಲರ ಎದುರಿನಲ್ಲಿಯೇ ತನ್ನ ರವಿಕೆಯಿಂದ ಪರ್ಸ್ ತೆಗೆದಳು. ಆರಾಮ ಅಂತ ಇದ್ದಳು. ಪೊಲೀಸರು ಲೌಡಿ ಅಂತ ಬೈದರೂ ಬೀಡಾವನ್ನು ಪುಚಕ್ಕನೆ ಉಗುಳಿ ಕಿಲಕಿಲನೆ ಮಾತಾಡುತ್ತಿದ್ದಳು. ಆದರೆ ನನಗೆ ಕೋರ್ಟಿನ ಮೆಟ್ಟಿಲು ಹತ್ತುವಾಗ ಕೈ ಕಾಲು ಅದುರುತ್ತಿತ್ತು. ಡೈವೋರ್ಸ್ ತೆಗೆದುಕೊಂಡ ಗಂಡಸು ಬದುಕಬಲ್ಲ. ಆದರೆ ನನ್ನಂಥವರು ಹಾಗೆ ಬದುಕಲು ಸಾಧ್ಯವಾ ಅಂತ ಅನಿಸುತ್ತಿತ್ತು. ಒಬ್ಬ ರಾಕ್ಷಸ ರಾವಣನೊಂದಿಗೆ ಆ ಮಂಡೋದರಿ ಹೇಗೆ ಬದುಕಿದಳೋ — ಆ ದೇವರೇ ಬಲ್ಲ.

"ಡೈವೋರ್ಸ್ ಸಿಕ್ಕಿದ ದಿನ ಬಹಳ ಅತ್ತುಬಿಟ್ಟೆ" ಎಂದ ಭಾರತಿ ಮತ್ತೆ ರವಿಕೆಯ ಹುಕ್ಕನ್ನು ಹಾಕಿದಳು. ರಾಹುಲ ಕತ್ತಲೆಯಲ್ಲಿಯೇ ಕುಡಿಯುತ್ತಿರುವುದು ಅವಳಿಗೆ ಗೊತ್ತಾಗುತ್ತಿತ್ತು. ರಾಹುಲ ಸಿಗರೇಟು ಉರಿಸಿದ. ಹಾಗೆ ಉರಿಸುವಾಗ ಅವನು ಗಾಳಿಗೆ ಬೆಂಕಿಕಡ್ಡಿಯು ಆರದಿರಲಿ ಎಂದು ಕೈ ಅಡ್ಡ ಹಿಡಿದದ್ದರಿಂದ ಭಾರತಿಗೆ ಅವನ ಮುಖ ಮಾತ್ರ ಕಾಣಿಸಿತು. ಅಳುತ್ತಲೇ 'ನೀವು ಗಂಡಸರು ಎಂದಳು.

'ಭಾರತಿ ಮತ್ತೆ ಮತ್ತೆ ಗಂಡಸರು, ಹೆಂಗಸರು ಅಂತ ಹೇಳೋದು ಬೇಡ. ಅದ ನಿನ್ನನ್ನು ನೀನು ರಕ್ಷಿಸಿ ಕೊಳ್ಳುವುದಕ್ಕೆ ನೆಯ್ದಿರುವ ಒಂದು ಚಾಣಕ್ಯ ತಂತ್ರ '.

'ಇಲ್ಲ, ಹಾಗನ್ನುವುದಿಲ್ಲ, ಭಾರತಿ, ನೀನು ಯಾರು?

'ಒಳ್ಳೆ ಕತೆಯಪ್ಪ ನಾನು ಭಾರತಿ"

'ಅಲ್ಲ ನೀನು ಒಬ್ಬಳು ಹೆಂಗಸು.

'ಹೌದು'

'ಎಲ್ಲಾ ಹೆಂಗಸರೂ ಹೀಗೆಯಾ?'

'ನಾನು'

'ರಾಹುಲ ಒಬ್ಬ ಗಂಡಸು, ಎಲ್ಲಾ ಗಂಡಸರ ಹಾಗಲ್ಲ 'ನೋಡು ಭಾರತಿ ಸುಮ್ಮನೆ ಗಂಡಸು ಹೆಂಗಸು ಅಂತ ಬೈಯುತ್ತಾ ಜೀವಮಾನವಿಡೀ ಅದನ್ನೇ ಮಾಡ್ತಾ ಕೂತಿರುವುದಕ್ಕೆ ನಿನಗೆ ಬೇರೆ ಕೆಲಸ ಇಲ್ವಾ?'

'ಮತ್ತೆ ಏನು ಮಾಡಬೇಕು?'

'ಪ್ರಶ್ನೆಯೂ ನಾನು ಕೇಳಬೇಕು. ಉತ್ತರವೂ ನಾನು ಹೇಳಬೇಕು ಅಂದ್ರೆ ಹೇಗೆ? ನಿನಗೂ ಮಂಡೆ ಅನ್ನುವುದು ಒಂದು ಇದೆ. ಅದರಲ್ಲಿ ಮಿದುಳು ಅನ್ನುವುದೂ ಇದೆ. ಬರೀ ಬೋದಾಳಗಿತ್ತಿಯ ಥರ ಯೋಚನೆ ಮಾಡಬೇಡ ರಾಹುಲನ ಮಾತಿನಲ್ಲಿ ಸ್ವಲ್ಪ ತೊದಲುವಿಕೆಯು ಕಾಣಿಸಿಕೊಂಡಿತು. ತಕ್ಷಣ ಭಾರತಿ ಕೇಳಿದಳು: 'ನಾನೂ ಒಂಚೂರು ಕುಡಿಯಲಾ'

'ಕುಡಿ'

'ನಿನ್ನ ಚೆಂಬು ಎಲ್ಲಿದೆ?'

'ಕೊಟ್ಟೆ' ರಾಹುಲ ಕತ್ತಲೆಯಲ್ಲಿಯೇ ಪರದಾಡಿ ಅವಳ ಕೈಗೆ ಕೊಟ್ಟ. ಒಂದೇ ಗುಟುಕು ಕುಡಿದು ಭಾರತಿ 'ಬೇಡ ಮಾರಾಯ' ಅಂದಳು.

'ಒಳ್ಳೇದು: ಎಲ್ಲಿ ಎಲ್ಲಾ ಖಾಲಿ ಮಾಡ್ತಿಯೋ ಅಂತ ಹೆದರಿಕೆಯಿತ್ತು ಎಂದ. ಭಾರತಿ ಮತ್ತೆ ಹಾಗೆಯೇ ತೆಗೆದುಕೊಂಡು ಕುಡಿದ, ರಾಹುಲನಿಗೆ ತುಂಬಾ ಅಮಲೇರುತ್ತಿದೆಯೇನೋ ಎಂದು ಅನಿಸತೊಡಗುವಷ್ಟರಲ್ಲಿ ಭಾರತಿ 'ಸಾಕೋ ಮಾರಾಯ' ಅಂದಳು.

ರಾಹುಲ 'ಭಾರತಿ ನೀನು ಹೋಗಿ ಊಟ ಮಾಡು, ನಾನು ನಂತರ ಊಟ ಮಾಡ್ತೇನೆ' ಎಂದ.

'ಏನೂ ಬೇಡ. ಊಟ ಮಾಡುವುದಿದ್ದರೆ ಇಬ್ಬರೂ ಜೊತೆಯಲ್ಲಿಯೇ ಊಟ ಮಾಡೋಣ' ಎಂದಳು. ಅವನ ಹತ್ತಿರ ಬಂದ ಭಾರತಿ ಅವನ ತೊಡೆಯ ಮೇಲೆ ಮಲಗಿ 'ನಾನು ತಪ್ಪು ಮಾಡಿದೆ. ದಿವಾಕರನನ್ನು ಮದುವೆಯಾಗಬಾರದಿತ್ತು. ನನ್ನ ಒಂದು ತಪ್ಪು ಹಿಂಡಿ ಹಿಪ್ಪೆ ಮಾಡಿತು, ರಾಹುಲ' ಎಂದು ಅತ್ತಳು. ಅವಳು ಆ ಕ್ಷಣಕ್ಕೆ ಮಗುವಾಗಿದ್ದಳು.

ಪ್ರತಿಕ್ರಿಯಿಸಿ: **feedback@sudha.co.in**